RDPR/366/RRC/2021-RDPR-SUV-RDPR SEC

3424542/2021/RDPR-SG

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 1394 |
| **ಸದಸ್ಯರ ಹೆಸರು** | ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | 24.12.2021 |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಬೆಟ್ಟದಕೂರ್ಲಿ ಗ್ರಾಮದಿಂದ ತುಡನೂರು ಗ್ರಾಮದವರೆಗಿನ ರಸ್ತೆ ಡಾಂಬರೀಕರಣ ಮಾಡುವ ಕಾಮಗಾರಿ ಯಾವಾಗ ಕೈಗೊಳ್ಳಲಾಗುವುದು; (ಮಾಹಿತಿ ನೀಡುವುದು) | ಸೊರಬ ತಾಲ್ಲೂಕಿನ ಬೆಟ್ಟದಕೂರ್ಲಿ ಗ್ರಾಮದಿಂದ ತುಡನೂರು ಗ್ರಾಮದವರೆಗಿನ ರಸ್ತೆಯು ಮಣ್ಣಿನ ರಸ್ತೆಯಾಗಿದ್ದು, 2.50 ಕಿ.ಮೀ. ಉದ್ದದ ರಸ್ತೆಯಾಗಿರುತ್ತದೆ.<br><br>ಸದರಿ ರಸ್ತೆಗೆ ಎರಡು ಪದರ ಜೆಲ್ಲಿ ಬಿಚಾವಣೆ ಮಾಡಿ ಡಾಂಬರೀಕರಣ ಮಾಡಲು ಅಂದಾಜು ರೂ.100.00 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ.<br><br>ಆರ್ಥಿಕ ಇಲಾಖೆಯು ಒದಗಿಸುವ ಅನುದಾನದ ಲಭ್ಯತೆಯನ್ನಾಧರಿಸಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಬೇಕಿದೆ. |
| ಆ. | ಬೆಟ್ಟದಕೂರ್ಲಿ ಗ್ರಾಮದಿಂದ ಕಂತನಹಳ್ಳಿ ಬೇಚರ ಗ್ರಾಮದವರೆಗಿನ ರೈತನ ಜಮೀನಿಗೆ ಹೋಗುವ ರಸ್ತೆ ಅಭಿವೃದ್ಧಿ ಮಾಡಲಾಗುವುದೇ; | ಸದರಿ ರಸ್ತೆಯ (ಡಿ.ಆರ್.ಆರ್.ಪಿ. ರಸ್ತೆ) ಮೇಲ್ಮೈ ಪದರವು ಮಣ್ಣಿನ ರಸ್ತೆಯಾಗಿದ್ದು, 3.00 ಕಿ.ಮೀ. ಸರಪಳಿ ಹೊಂದಿದ್ದು, ರಸ್ತೆಗೆ WBM Grading-2 ಜೆಲ್ಲಿ ಬಿಚಾವಣೆ ಮಾಡಲು ಅಂದಾಜು ರೂ.45.00 ಲಕ್ಷಗಳ ಅನುದಾನದ ಅವಶ್ಯಕತೆಯಿರುವುದಾಗಿ ಅಂದಾಜಿಸಲಾಗಿದೆ.<br><br>ಅನುದಾನದ ಲಭ್ಯತೆಯನ್ನಾಧರಿಸಿ ರಸ್ತೆಯನ್ನು ಅಭಿವೃದ್ಧಿಪಡಿಲಸಲು ಕ್ರಮ ಕೈಗೊಳ್ಳಬೇಕಿದೆ. |
| ಇ. | ಪುಟ್ಟನಹಳ್ಳಿ ಗ್ರಾಮದ ಊರವಳಗಿನ ರಸ್ತೆ ಹಾಗೂ ಹಕ್ಕಲಗೇರಿ ವರೆಗೆ ರಸ್ತೆ ಅಭಿವೃದ್ಧಿ ಕಾರ್ಯ ಯಾವಾಗ ಮಾಡಲಾಗುವುದು; | ಪುಟ್ಟನಹಳ್ಳಿ ಗ್ರಾಮದ ಊರವಳಗಿನ ರಸ್ತೆ ಹಾಗೂ ಹಕ್ಕಲಗೇರಿ ವರೆಗೆ (ಡಿ.ಆರ್.ಆರ್.ಪಿ. ರಸ್ತೆ) ರಸ್ತೆ ಅಭಿವೃದ್ಧಿಪಡಿಸಲು ಒಂದು ಬ್ರಿಡ್ಜ್ ನಿರ್ಮಿಸಿ ಕೊಂಡು 1.00 ಕಿ.ಮೀ. ರಸ್ತೆ ನಿರ್ಮಿಸಬಹುದಾಗಿರುತ್ತದೆ. ಇದಕ್ಕೆ ಅಂದಾಜು ರೂ.100.00 ಲಕ್ಷಗಳ ಅವಶ್ಯಕತೆ ಇರುತ್ತದೆ.<br><br>ಆರ್ಥಿಕ ಇಲಾಖೆಯು ಒದಗಿಸುವ ಅನುದಾನ ಅನುದಾನದ ಲಭ್ಯತೆಯನ್ನಾಧರಿಸಿ ರಸ್ತೆಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಬೇಕಿದೆ. |
| ಈ. | ಶಿರಿನಾಯಕನಕೊಪ್ಪ ಗ್ರಾಮದಿಂದ ಕಂತನಹಳ್ಳಿ ಬೇಚರ ಗ್ರಾಮದವರೆಗೆ ರಸ್ತೆ | ಬಂದಿರುವುದಿಲ್ಲ |

| | | |
|---|---|---|
| | ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಉ. | ದ್ಯಾವನಹಳ್ಳಿ ಗ್ರಾಮದ ಊರ ಒಳಗಿನ ರಸ್ತೆ ಅಭಿವೃದ್ಧಿ ಕಾರ್ಯ ಯಾವಾಗ ಕೈಗೊಳ್ಳಲಾಗುವುದು; | ಸದರಿ (ಡಿ.ಆರ್.ಆರ್.ಪಿ. ರಸ್ತೆ) ರಸ್ತೆಯು ಮೇಲ್ಮೈ ಪದರವು ಮಣ್ಣಿನ ರಸ್ತೆಯಾಗಿದ್ದು, ಸುಮಾರು 1.00 ಕಿ.,ಮೀ. ರಸ್ತೆ ಇದ್ದು, ಡಾಂಬರೀಕರಣ ಮಾಡಲು ರೂ.60.00 ಲಕ್ಷಗಳ ಅನುದಾನದ ಅವಶ್ಯಕತೆ ಇದೆ. |
| ಊ. | ಈ ಎಲ್ಲಾ ಗ್ರಾಮಗಳ ರಸ್ತೆ ಅಭಿವೃದ್ಧಿ ಕಾರ್ಯ ಯಾವ ಕಾಲಮಿತಿಯೊಳಗೆ ಕೈಗೊಳ್ಳಲಾಗುವುದು? (ಸಂಪೂರ್ಣ ವಿವರ ನೀಡುವುದು) | ಮೇಲ್ಕಂಡ ಎಲ್ಲಾ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತುತ ಸಾಲಿನಲ್ಲಿ ಅನುದಾನದ ಕೊರತೆಯಾಗಿರುತ್ತದೆ.<br><br>ಗ್ರಾಮೀಣ ಪ್ರದೇಶಗಳ ವ್ಯಾಪ್ತಿಯಲ್ಲಿ ಅರ್ಹ ವಿರುವ ಹಾಗೂ ಅಭಿವೃದ್ಧಿ ಪಡಿಸಲೇ ಬೇಕಾಗಿರುವ ರಸ್ತೆಗಳಿಗೆ ಹೆಚ್ಚುವರಿ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ .<br><br>ಆರ್ಥಿಕ ಇಲಾಖೆಯು ಅನುದಾನ ಒದಗಿಸಿದ್ದಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಮೇಲ್ಕಂಡ ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಬೇಕಿದೆ. |

ಸಂಖ್ಯೆ: ಗ್ರಾಅಪ:15ನೇವಿಸ:144:ಆರ್.ಆರ್.ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು